ಕುಡಿಯುವ ನೀರಿನ ವಿವಿಧ ಯೋಜನೆಗಳು

2436(2300); ಶ್ರೀ ಬೋಪಯ್ಯ ಕೆ.ಜಿ (ವಿರಾಜಪೇಟೆ)

ಅ) 2012–13, 2013–14 ಹಾಗೂ 2014–15ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಕುಡಿಯುವ ನೀರಿಗಾಗಿ ವಿವಿಧ ಯೋಜನೆಗಳಡಿಯಲ್ಲಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ (ಯೋಜನೆಗಳ ಸಹಿತ ಪಂಚಾಯ್ತಿವಾರು ಕಾಮಗಾರಿಗಳ ವಿವರಗಳನ್ನು ಒದಗಿಸುವುದು);

ಆ) ಬಾಕಿ ಇರುವ ಕಾಮಗಾರಿಗಳೆಷ್ಟು (ವಿವರ ಒದಗಿಸುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಕೊಡಗು ಜಿಲ್ಲೆಗೆ 2012–13, 2013–14 ಹಾಗೂ 2014–15ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕಾಗಿ NRDWP ಯೋಜನೆಯಡಿ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿದೆ.

ವರ್ಷ	ಅನುದಾನ (ರೂ. ಲಕ್ಷಗಳಲ್ಲಿ)		
	ರಾಜ್ಯ	ಕೇಂದ್ರ	ಒಟ್ಟು
2012–2013	925.14	655.70	1580.84
2013–2014	423.00	760.66	1183.66
2014–2015	522.29	282.00	834.29

ಕಾಮಗಾರಿ ವಹಿ ವಿವರಗಳನ್ನು www.indiawater.gov.in ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ಮಾಹಿತಿಗಾಗಿ ಮುಕ್ತವಾಗಿ ಪ್ರತಿಬಿಂಬಿಸಲಾಗಿದೆ.

ಆ) ಕೊಡಗು ಜಿಲ್ಲೆಯಲ್ಲಿ 2014–15ನೇ ಸಾಲಿನಲ್ಲಿ ಒಟ್ಟು 266 ಮುಂದುವರಿದ ಕಾಮಗಾರಿಗಳು ಮತ್ತು 148 ಹೊಸ ಕಾಮಗಾರಿಗಳು ಕೈಗೊಳ್ಳಲಾಗಿದೆ. ಸದರಿ ಒಟ್ಟು 414 ಕಾಮಗಾರಿಗಳಲ್ಲಿ ಒಟ್ಟು 249

ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಎಲ್ಲಾ ಕಾಮಗಾರಿಗಳ ವಸ್ತುಸ್ಥಿತಿ ವಿವರಗಳನ್ನು www.indiawater.gov.in ವೆಬ್‌ಸೈಟ್ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಸಾರ್ವಜನಿಕ ಮಾಹಿತಿಗಾಗಿ ಮುಕ್ತವಾಗಿ ಪ್ರತಿಬಿಂಬಿಸಲಾಗಿದೆ.

ಬೆಂಗಳೂರು ನಗರದ ಗ್ರಂಥಾಲಯಗಳಿಗೆ ಪತ್ರಿಕೆಗಳ ಸರಬರಾಜು

2437(3416); ಶ್ರೀ ಚೆಲುವರಾಯಸ್ವಾಮಿ ಎನ್.

ಅ) ಬೆಂಗಳೂರು ನಗರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಎಷ್ಟು; ಈ ಗ್ರಂಥಾಲಯಗಳಿಗೆ ಪ್ರತಿ ದಿನ ಬರುವ ಓದುಗರ ಸಂಖ್ಯೆ ಎಷ್ಟು; ಸ್ವಂತ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಪಾವತಿ ಮಾಡುತ್ತಿರುವ ವಾರ್ಷಿಕ ಬಾಡಿಗೆ ಎಷ್ಟು;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಬಾಕಿ ಇರುವ ಗ್ರಂಥಾಲಯ ಉಪಕರ ಎಷ್ಟು; ಈ ಮೊತ್ತ ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ;

ಇ) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳು ಪತ್ರಿಕಾ ಸರಬರಾಜುದಾರರಿಗೆ ನೀಡಬೇಕಾದ ಬಿಲ್‌ನ ಮೊತ್ತ ಎಷ್ಟು; ಪತ್ರಿಕಾ ಸರಬರಾಜುದಾರರು ಮಾರ್ಚ್ 1 ರಿಂದ ಪತ್ರಿಕೆಗಳ ಸರಬರಾಜ್‌ನ್ನು ನಿಲ್ಲಿಸುವುದಾಗಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ: ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?